ಕೆಂಪಯ್ಯ, ಅವನಿಗೆ ದುರ್ಗಸಿಂಹನ ಪಂಚತಂತ್ರದಲ್ಲೂ ಇಲ್ಲದ ಐನಾತಿ ಉಪಾಯವೊಂದನ್ನು ಹೇಳಿದ್ದ. 'ನಿನ್ ಗುರುಗಳು ಪಾಠ ಮಾಡುವಾಗ ಅವರ ಕ್ಯಾಬಿನ್‌ಗೆ ಹೋಗಿ ಫೇಸ್‌ಬುಕ್ ಲೈವ್ ಮಾಡಿ, ನನ್ನ ಸಾವಿಗೆ ಡಾ. ಯಡಾಂಬ ನಾಗರಾಜರೇ ಕಾರಣ. ಅದಕ್ಕಾಗಿ ನಾನು ಇವತ್ತು ಅವರದ್ದೇ ಕ್ಯಾಬಿನ್‌ನಲ್ಲಿರುವ ಈ ಫ್ಯಾನಿಗೆ ನೇಣು ಬಿಗಿದುಕೊಂಡು ಸಾಯ್ತೀನಿ' ಅಂದು ಫ್ಯಾನಿಗೆ ಹಗ್ಗ ಹಾಕ್ತಿರು. ಅಷ್ಟರಲ್ಲಿ ನಾನು ನಾಲ್ಕಾರು ಮೀಡಿಯಾ ಜನರನ್ನ, ಒಂದಷ್ಟು ಜನ ಸಂಘಟನೆಯವರನ್ನ ಕರೆದುಕೊಂಡು ಬಂದು ನಿನ್ನ ಬಿಡಿಸ್ತೀನಿ. ಆಮೇಲೆ ನೋಡು ನಿನ್ ಗುರುಗಳಿಗೆ ಬರೀ ಲಕ್ಷ್ಮಿ ಅಲ್ಲ; ಸರಸ್ವತಿ, ಏಸಪ್ಪ, ಅಲ್ಲಪ್ಪ, ಅವರಪ್ಪ ಅಷ್ಟೇ ಅಲ್ಲ ಪಾವಗಡದ ಮಣೆಸೇವೆ – ಸ್ವಾಮನ ಕುಣಿತಾನೂ ತೋರಿಸೋಣ ಎಂದು ಹುರಿದುಂಬಿಸಿ, ಎರಡು ಬೆರಳುಗಳ ಮಧ್ಯೆ ಸಿಲುಕಿ ಒದ್ದಾಡುತ್ತಿದ್ದ ಸಿಗರೇಟನ್ನು ತುಟಿಗೆ ಕೂಡಿಸಿ, ಒಂದೇ ಒಂದು ಹನಿ ಗ್ಯಾಸ್ ಇದ್ದ ಹತ್ತು ರೂಪಾಯಿ ಲೈಟರ್‌ನಲ್ಲಿ ಆ ಸಿಗರೇಟ್ ತಲೆಗೆ ಬೆಂಕಿ ಇಕ್ಕಿ, ದೀರ್ಘವಾದ ಧಮ್ ಎಳೆದು ರಾಮಾಂಜಿನಿಯ ಮುಖಕ್ಕೆ ಹುಫ್ ಮಾಡಿ ಹುಬ್ಬಾರಿಸಿದ. 'ಇದೆಲ್ಲಾ ನಡೀವಾಗ ನಿನ್ ಗುರುಗಳು ಕ್ಲಾಸಿನಲ್ಲಿರುವಂತೆ ನೋಡಿಕೋ' ಎಂದು ಮತ್ತೊಮ್ಮೆ ಎಚ್ಚರಿಕೆಯನ್ನೂ ನೀಡಿದ್ದ.

ಮರುದಿನ ಬೆಳಗ್ಗೆ ನಾಗರಾಜರು ಸರ್ವವಸ್ತ್ರಾಲಂಕಾರ ಭೂಷಿತರಾಗಿ ಎಕ್ಸ್‌ಪ್ರೈಜ್ಡ್ ವಿಷಯದ ಬಗ್ಗೆ ಯಾವತ್ತೂ ಇಲ್ಲದ ದನಿಯಲ್ಲಿ ವಿತ್-ಆ್ಯಕ್ಷನ್ ಪಾಠ ಮಾಡುತ್ತಿದ್ದರು. ಕಳೆದ ಒಂದೂವರೆ ವರ್ಷಗಳಲ್ಲಿ ಅವರಿಂದ ಇಂಥಾ ಎಕ್ಸ್‌ಲೆಂಟ್ ಪಾಠವ ಎಂದೂ ಕೇಳಿರದ ನೋಡಿರದ ಸೆಕೆಂಡ್ ಎಂ.ಎಸ್ಸಿ ವಿದ್ಯಾರ್ಥಿಗಳು ನಾಗರಾಜರ ಪಾಠಕ್ಕೆ ತಲೆದೂಗಿ ಕೂತಿರಲು, ಕಿಲಾಡಿ ಕೆಂಪಯ್ಯ ನಾಲ್ಕಾರು ಜನ ಪತ್ರಕರ್ತರೊಂದಿಗೆ ವಿಭಾಗಕ್ಕೆ ಹಾಜರಾಗಿ ಟೈಮ್ ಸೆನ್ಸ್ ಅಂದ್ರೆ ನಂದು! ಅಂತ ಬೀಗುತ್ತಿದ್ದ.

ನಾಗರಾಜನ ಕ್ಯಾಬಿನ್ ಒಳಗಿದ್ದ ರಾಮಾಂಜಿನಿ ಇನ್ನೂ ಫೇಸ್‌ಬುಕ್ ಲೈವ್ ಮಾಡಲೇ ಇಲ್ಲವಲ್ಲ ಅಂತ ಒಂದು ಫೋನಾಕಿದ. ಅಂದುಕೊಂಡ ಪ್ಲಾನಿನಂತೆ ರಾಮಾಂಜಿನಿ ಯೂನಿವರ್ಸಿಟಿಯ ದುಡ್ಡಲ್ಲಿ ತಗಂಡಿದ್ದ ತಿಂಗಳೂ ತುಂಬಿರದ ಹೊಚ್ಚೊಸ ಮೊಬೈಲ್ನಲ್ಲಿ ರಾತ್ರಿಯೆಲ್ಲಾ 'ಹೌ ಟು ಲೈವ್ ಇನ್ ಫೇಸ್ ಬುಕ್' ಅಂತ ಜಾಲಾಡಿ ಕಲಿತ ವಿದ್ಯೆ ಬಳಸಿ ಅವನ ಜೀವನದಲ್ಲೇ ಮೊದಲ ಬಾರಿಗೆ ಫೇಸ್‌ಬುಕ್ ಲೈವ್ ಬಂದಿದ್ದ. ನೋಡಿ ಫ್ರೆಂಡ್ಸ್, ನಾನು ಇಂತೋನು, ಇಲ್ಲಿ ಇದು ಮಾಡ್ತಿದ್ದೀನಿ, ನನ್ನ ಗೈಡು ಇವರು, ಈ ವಿಚಾರವಾಗಿ, ಈ ಫ್ಯಾನಿಗೆ... ಇತ್ಯಾದಿ ಎಲ್ಲವನ್ನು ಹೇಳಿ ಮೊಬೈಲನ್ನು ತಾನು ಹಗ್ಗ ಏರಿಸಿಕೊಳ್ಳೋದು ಕಾಣೋತರ ಇಟ್ಟು, ಫಲಾಫಲಗಳನ್ನು ದಬ್ಬೇಗಟ್ಟದ ಕೆಂಪಯ್ಯನಿಗೆ ಅರ್ಪಿಸಿ ಕಾರ್ಯ ಪ್ರವೃತ್ತನಾದ.

ಮೂರಕ್ಕೆ ಇಕ್ಕಿದರೂ, ಐದಕ್ಕೆ ಇಕ್ಕಿದರೂ ಒಂದರಲ್ಲೇ ಸುತ್ತುವ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ಕಾಲದ ಸಾಕ್ಷಿಯಾಗಿ ಉಳಿದಿರುವ ಈ ಏಕೈಕ ಫ್ಯಾನಿಗೆ ನೇಣು ಬಿಗಿದು ತನ್ನ ಸರ್ವಿಸ್‌ನಲ್ಲಿಯೇ ನಿಧಾನಕ್ಕೆ ಸುತ್ತುವ ಅಪವಾದವೊಂದನ್ನು ಬಿಟ್ಟು, ಯಾವ ಕಪ್ಪು ಚುಕ್ಕಿ ಇಲ್ಲದೆ ನಿವೃತ್ತಿಯ ಕನಸು ಕಾಣುತ್ತಿದ್ದ ಆ ಫ್ಯಾನು ರಾಮಾಂಜಿನಿ ಎಸೆಯುವ ಹಗ್ಗದಿಂದ ತಪ್ಪಿಸಿಕೊಳ್ಳಲು ಪರದಾಡುತ್ತಿತ್ತು. ಇದೆಲ್ಲವನ್ನೂ ಲೈವ್‌ನಲ್ಲಿ ಕಾಣುತ್ತಿದ್ದ ಕಿಲಾಡಿ ಕೆಂಪಯ್ಯನು ತನ್ನ ಜೊತೆ ಬಂದಿದ್ದ ಪತ್ರಕರ್ತರಿಗೆ ರೋಲ್ ಕ್ಯಾಮೆರಾ ಆಕ್ಷನ್ ಎಂದವನೇ 'ವಿದ್ಯಾರ್ಥಿಗಳಿಗೆ ನ್ಯಾಯ ಸಿಗಲಿ, ವಿದ್ಯಾರ್ಥಿ ಹೋರಾಟ ಚಿರಾಯುವಾಗಲಿ, ಡಾ. ಯಡಾಂಬ ನಾಗರಾಜರಿಗೆ ಧಿಕ್ಕಾರ' ಎಂದು ಒಮ್ಮೆಲೆ ಕೂಗಿದ. ಜೊತೆಗಿದ್ದವರೂ 'ಧಿಕ್ಕಾರ' ಎನ್ನಲಾಗಿ ಆ ದನಿ ಇಡೀ ಬಿಲ್ಡಿಂಗ್ ತುಂಬಾ ಮಾರ್ದನಿಸಿತು. ನಾಗರಾಜರ ಕ್ಯಾಬಿನ್ ಚಿಲಕ ಹಾಕಿತ್ತು. ಕೆಂಪಯ್ಯನ ಬೃಹದಾಕಾರದ ಶರೀರದ ಒಂದೇ ಒಂದು ಒದೆತಕ್ಕೆ ಆ ಕದದ ಎರಡೂ ಕಡೆಯ ಲಾಕ್‌ಗಳು ಕಿತ್ತು ಬಂದವು. ಆ ಶಬ್ದಕ್ಕೆ ತರಗತಿಯಲ್ಲಿದ್ದ ಪ್ರಾಧ್ಯಾಪಕರು- ವಿದ್ಯಾರ್ಥಿಗಳೆಲ್ಲಾ ಆಚೆಗೆ ಓಡಿಬಂದರು.

ರಾಮಾಂಜಿನಿ, ನಾಗರಾಜರ ಕ್ಯಾಬಿನಿನೊಳಗೆ ಹಗ್ಗ ಹಿಡಿದು ಚೇರಿನ ಮೇಲೆ ನಿಂತಿದ್ದ. ಇದೆಲ್ಲವನ್ನೂ ಕಣ್ಣಾರೆ ಕಂಡ ವಿಭಾಗದ ಮುಖ್ಯಸ್ಥರೂ, ನ್ಯೂ ಡಯಾಲಿಸಿಸ್ ಪೇಶಂಟೂ ಆಗಿದ್ದ ಪ್ರೊ. ಶಾಮನಂದನ ಅಂಗಾಡಿ ಅವರು ತಮ್ಮೆರಡು ಕೈಗಳನ್ನು ಕಿಬ್ಬೊಟ್ಟೆಯ ಮೇಲಿಟ್ಟುಕೊಂಡೇ ನಿಂತಿದ್ದರು. ಈ ಲೋಕದಲ್ಲಿ ಏನು ನಡೆಯುತ್ತಿದೆ ಎಂಬುದು ಕ್ಷಣದಲ್ಲಿ ಅರಿವಿಗೆ ಬಂದು ನಾಗರಾಜರಿಗೆ ಕೈ-ಕಾಲು ಆಡದಾಗಿದ್ದವು, ಮಾತು ಹೊರಡದಾಗಿತ್ತು.

ಹೊರಗಿನಿಂದ ಬಂದಿದ್ದ ನಾಲ್ಕಾರು ಜನ